ಚಿಕ್ಕ ಪತ್ರಿಕೆಗಳಿಗೆ ಜಾಹೀರಾತು ನೀಡುವುದು

೧೩೬೭. ಶ್ರೀ ಬಾಬುರೆಡ್ಡಿ ಎಂ. ತಂಗಳಿ (ಬೀಳಗಿ).—ಮಾನ್ಯ ವಾರ್ತಾ ಯುವಜನ ಸೇವೆ ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಿಜಾಪುರ ಜಿಲ್ಲೆಯಲ್ಲಿ ನೋಂದಣಿಯಾಗಿರುವ ದಿನ, ವಾರ ಹಾಗೂ ಮಾಸಿಕ ಪತ್ರಿಕೆಗಳೆಷ್ಟು ? (ವಿವರವಾದ ಮಾಹಿತಿಯನ್ನು ಒದಗಿಸುವುದು).

ಆ) ಈ ಪತ್ರಿಕೆಗಳಿಗೆ ೧೯೮೩-೮೪ ರಲ್ಲಿ ವಾರ್ತಾ ಇಲಾಖೆಯಿಂದ ಜಾಹೀರಾತಿಗಾಗಿ ಖರ್ಚು ಮಾಡಿದ ಹಣವೆಷ್ಟು ? (ಪತ್ರಿಕಾವಾರು ಮಾಹಿತಿಯನ್ನು ಒದಗಿಸುವುದು).

ಇ) ಯಾವ ಆಧಾರದ ಮೇರೆಗೆ ಜಾಹೀರಾತು ಮಂಜೂರು ಮಾಡಲಾಗಿದೆ ?

ಈ) ಅತ್ಯಂತ ಕಡಿಮೆ ಹಾಗೂ ಅತ್ಯಂತ ಹೆಚ್ಚು ಜಾಹಿರಾತು ಪಡೆದ ಪತ್ರಿಕೆಯ ಹೆಸರೇನು ? ಇಲ್ಲಿ ಆ ಬಗೆ ಪಕ್ಷಪಾತ ಮಾಡಿರುವುದನ್ನು ವಿಚಾರಿಸಿ ಸಂಬಂಧಿತರ ಮೇಲೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜೀವರಾಜ ಆಳ್ವ (ವಾರ್ತಾ, ಯುವಜನ ಸೇವೆ ಹಾಗೂ ಕ್ರೀಡೆ, ಪ್ರವಾಸೋದ್ಯಮ ಮಂತ್ರಿಗಳು).—

ಅ) ಬಿಜಾಪುರ ಜಿಲ್ಲೆಯಿಂದ ನೋಂದಣಿಯಾಗಿರುವ ದಿನ ಪತ್ರಿಕೆಗಳು ೮, ವಾರ ಪತ್ರಿಕೆಗಳು ೧೨ ಹಾಗೂ ಮಾಸ ಪತ್ರಿಕೆಗಳು ೪.

ಆ) ದಿನಪತ್ರಿಕೆಗಳಿಗೆ	ವಾರಪತ್ರಿಕೆಗಳಿಗೆ	ಮಾಸಿಕಗಳಿಗೆ
	೧೯೮೩-೮೪	
ರೂ. ಪೈ.	ರೂ. ಪೈ.	ರೂ. ಪೈ.
೧,೨೬,೮೭೭-೦೦	೧೩,೮೦೦-೦೮	೪,೫೦೦-೦೦
	೧೯೮೪-೮೫	
೭೮,೫೬೨-೭೫	೬,೭೦೦-೦೦	೨,೪೦೦-೦೦

(ಪತ್ರಿಕಾವಾರು ವಿವರಗಳು ಅನುಬಂಧ 'ಅ' ನಲ್ಲಿ ಇವೆ).

ಇ) ಸರ್ಕಾರದ ಜಾಹೀರಾತು ನೀತಿಯಂತೆ ಪ್ರತಿಯೊಂದು ಪತ್ರಿಕೆಯನ್ನು ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿ ಸೇರಿಸಿಕೊಳ್ಳುವ ಮೊದಲೇ ಜಿಲ್ಲಾ ಸಮಿತಿಯಿಂದ ವರದಿಯನ್ನು ಪಡೆದು ಈ ಪತ್ರಿಕೆಯನ್ನು ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ಅರ್ಹತೆಯನ್ನು ಪಡೆದಿದ್ದರೆ ಮಾತ್ರ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗುವುದು, ಅಂತು ಪತ್ರಿಕೆಯ ಪ್ರಸಾರ ಸಂಖ್ಯೆ ಪ್ರಕಟಣೆಯ ಪುಟಗಳು, ಸೈಜು, ಆಕಾರಗಳ ಮೇಲೆ ಜಾಹೀರಾತು ದರಗಳನ್ನು ನಿಗದಿಪಡಿಸಿ ಜಾಹೀರಾತನ್ನು ನೀಡಲಾಗುವುದು.

೧) ಅತ್ಯಂತ ಹೆಚ್ಚಿನ ಜಾಹೀರಾತು ಪಡೆದಿರುವ ದಿನಪತ್ರಿಕೆ—ಉದಯ (ಬಿಜಾಪುರ).

೨) ಕಡಿಮೆ ಜಾಹೀರಾತು ಪಡೆದಿರುವ ದಿನಪತ್ರಿಕೆ—ಬಿಜಾಪುರ ವಾರ್ತೆ.

ಈ) ಉದಯ ದಿನ ಪತ್ರಿಕೆಯು ಬಹಳ ಹಿಂದಿನಿಂದಲೂ ಪ್ರಕಟವಾಗುತ್ತಿದೆ ಮತ್ತು ಜಾಹೀರಾತು ದರವು ರೂ. ೭ ರಂತೆ ಇರುವುದರಿಂದಲೂ ಹಾಗೂ ಬಿಜಾಪುರ ವಾರ್ತೆ ದಿನ ಪತ್ರಿಕೆಯು ಇತ್ತೀಚೆಗೆ ಪ್ರಾರಂಭಿಸಲ್ಪಟ್ಟಿದ್ದು ಈ ಪತ್ರಿಕೆಯ ಜಾಹೀರಾತು ದರ ರೂ. ೩, ಪ್ರತಿ ಕಾಲಂ ಸೆ. ಮೀಟರ್‌ಗೆ ಇರುವುದರಿಂದ ಉದಯ ಪತ್ರಿಕೆಗೆ ಹೆಚ್ಚಿನ ಮೊತ್ತದ ಜಾಹೀರಾತು ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಯಾವುದೇ ಪಕ್ಷಪಾತ ಮಾಡಿರುವುದಿಲ್ಲ.

ಅನುಬಂಧ – 'ಅ

ಬಿಜಾಪುರ ಜಿಲ್ಲೆಯಿಂದ ದಿನ ಪತ್ರಿಕೆ, ವಾರ ಪತ್ರಿಕೆ ಹಾಗೂ ಮಾಸಿಕ ಪತ್ರಿಕೆಗಳಿಗೆ ನೀಡಿರುವ ಜಾಹೀರಾತಿನ ವಿವರ

ದಿನ ಪತ್ರಿಕೆಗಳು

		1983–84	1984–85
		ರೂ. ಪೈ.	ರೂ. ಪೈ.
೧.	ಉದಯ, ಕನ್ನಡ ದಿನ ಪತ್ರಿಕೆ ಬಿಜಾಪುರ	೭೧,೧೩೭–೧೦	೫೭,೪೫–೦೦
೨.	ಬಿಜಾಪುರ ವಾರ್ತೆ, —''—	೧೦,೧೭೬–೦೦	೪,೨೦೬–೦೦
೩.	ಜಾಗರೀಕ, ಕನ್ನಡ ದಿನ ಪತ್ರಿಕೆ ಬಾಗಲಕೋಟೆ	೨೨,೪೮೫–೦೦	೮,೩೨೦–೨೫
೪.	ನಾಡನುಡಿ, —''—	೨೧,೩೨೯–೦೦	೭,೫೭೦–೫೦
೫.	ರಾಜಮಾರ್ಗ, ಕನ್ನಡ ದಿನ ಪತ್ರಿಕೆ, ಬಿಜಾಪುರ	೧,೫೦೦–೦೦	—
೬.	ವೀರವಾಣಿ, —''—	೨೫೦–೦೦	೫೦೦–೦೦
೭.	ಸಂಯುಂಕ್ತ ನಾಡು —''—	—	೫೦೦–೦೦
೮.	ಕನ್ನಡ ಕೋಗಿಲೆ, ಕನ್ನಡ ದಿನ ಪತ್ರಿಕೆ, ಧಾರವಾಡ	—	—

ವಾರಪತ್ರಿಕೆಗಳು : ಸಾಂಧರ್ಬಿಕ

		1983–84	1984–85
೧.	ಕರ್ನಾಟಕ ಸಂದೇಶ (ಬಿಜಾಪುರ)	೭೫೦–೦೦	೫೦೦–೦೦
೨.	ನಿರ್ಭಯ (ಬಿಜಾಪುರ)	೧,೦೦೦–೦೦	೭೫೦–೦೦
೩.	ವಿಕ್ರಾಂತ ಭಾರತ (ಜಮಖಂಡಿ)	೨,೫೦೦–೦೦	೫೦೦–೦೦
೪.	ಧಳವತಿ (ಮುದ್ದೇಬಿಹಾಳ)	೧,೨೫೦–೦೦	೨೫೦–೦೦
೫.	ಸಂದರ್ಶನ (ಬಿಜಾಪುರ)	೨,೫೦೦–೦೦	೧,೦೦೦–೦೦
೬.	ಶಾಂತಿದೂತ (ಬಿಜಾಪುರ)	೨೫೦–೦೦	೨೫೦–೦೦
೭.	ಹುಚ್ಚ (ಬೀಳಗಿ)	೨,೯೦೦–೦೦	೧,೨೦೦–೦೦
೮.	ಪರಿವರ್ತಕ (ಬಿಜಾಪುರ)	೨,೦೦೦–೦೦	೧,೦೦೦–೦೦

ಮಾಸಿಕಗಳು

		1983–84	1984–85
೧.	ಕಾಂತವಾಣಿ	೨,೫೦೦–೦೦	೧,೦೦೦–೦೦
೨.	ಧನ್ವಂತರಿ	—	—
೩.	ಕೃಷಿಕ ಸಮಾಚಾರ್	೧,೦೦೦–೦೦	೫೦೦–೦೦
೪.	ಕುಶಲ (ಬಾಗಲಕೋಟೆ)	೧,೦೦೦–೦೦	೯೦೦–೦೦

ಮಾಧ್ಯಮ ಪಟ್ಟಿಯಲ್ಲಿಲ್ಲದ ಪತ್ರಿಕೆಗಳು

		1983 84	1984–85
೧.	ಕರ್ನಾಟಕ ವೈಭವ, ಕನ್ನಡ ವಾರಪತ್ರಿಕೆ ಬಿಜಾಪುರ	—	—
೨.	ಭೀಕರ, —''—	೭೫೦–೦೦	೭೫೦–೦೦
೩.	ಆನಂದ. ಕನ್ನಡ ವಾರ ಪತ್ರಿಕೆ, ಚಡಚಣ (ಬಿಜಾಪುರ ಜಿಲ್ಲೆ)	—	೫೦೦–೦೦
೪.	ಬಾಲಭಾರತಿ, —''— ಬಿಜಾಪುರ ಜಿಲ್ಲೆ	—	—